**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಬಾಗೇಪಲ್ಲಿ**

ಸಿ.ಸಿ. 95/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ರವಣಪ್ಪ | ಸಿಡಬ್ಲೂಃ**2** |
| ಗಂಡನ ಹೆಸರು ಃ | | ಶ್ರೀನಿವಾಸ್ | ಪಿಡಬ್ಲೂಃ **2** |
| ವಯಸ್ಸು | ಃ | 45 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ಕೂಲಿ | 01.07.2026. |
| ವಾಸ ಸ್ಥಳ | ಃ | ಚಾಕವೇಲು ಗ್ರಾಮ | |

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ</u>**

ಚಾಸಾ.**1** ನನ್ನ ಗಂಡ. ಚಾಸಾ- **3** ರಿಂದ **7** ರವರು ಗೊತ್ತು, ಈಗ ನ್ಯಾಯಾಲಯದ ಮುಂದಿರುವ **1** ಮತ್ತು **5** ನೇ ಆರೋಪಿಗಳು ಗೊತ್ತು. **2** ರಿಂದ **4** ನೇ ಆರೋಪಿಗಳು ಗೈರು ಹಾಜರಿದ್ದು ಅವರ ಗುರುತಿಸುವಿಕೆಯಲ್ಲಿ ಆರೋಪಿ ಪರ ವಕೀಲರು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ.

ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ ಮತ್ತು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

**(ಮಾನ್ಯ ಸ.ಸಅ.ರವರು ಸಾಕ್ಷಿಯನ್ನು ಪ್ರತಿಕೂಲವೆಂದು ಪರಿಗಣಿಸಿದ್ದು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>**

ದಿನಾಂಕ 07.09.2021 ರಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಚಾಸಾ-1 ರವರು ಅಂಗಡಿಗೆ ಹೋಗುತ್ತಿದ್ದಾಗ, 1 ನೇ ಆರೋಪಿಯು ರಾಜುರವರ ಮನೆಯ ಬಳಿ ನಿಂತುಕೊಂಡಿದ್ದಾಗ, ಚೀಟಿ ಹಣ ಕೊಡುವಂತೆ ಕೇಳಿದಾಗ, 1 ನೇ ಆರೋಪಿಯು ಲೋಫರ್ ನನ್ನ ಮಗನೆ ಎಂದು ಚಾಸಾ-1 ರವರಿಗೆ ಬೈದಿರುತ್ತಾರೆ ಎಂದರೆ ಸರಿಯಲ್ಲ ಮತ್ತು ನಿನಗೆ ಯಾವುದೇ ಹಣ ಕೊಡಬೇಕಾಗಿಲ್ಲ. ನಿನ್ನನ್ನು ಇಲ್ಲಿಯೇ ಸಾಯಿಸಿಬಿಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲೆ ಕಬ್ಬಿಣದ ರಾಡಿನಿಂದ 1 ನೇ ಆರೋಪಿಯು

ಚಾಸಾ-1 ರವರ ಎಡ ಭಾಗದ ಕಿವಿಯ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ಚಾಸಾ-1 ರವರ ಬಲಗಾಲಿಗೆ ಹೊಡೆದಿರುತ್ತಾರೆ ಎಂದರೆ ಸರಯಲ್ಲ. 3 ನೇಆರೋಪಿಯು ಚಾಸಾ-1 ರವರ ತಲೆಯ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಆರೋಪಿಯು ಚಾಸಾ-1 ರವರ ಗಲ್ಲಪಟ್ಟಿಯನ್ನು ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿಯಲ್ಲ. 5 ನೇ ಆರೋಪಿಯು ಚಾಸಾ-1 ರವರನ್ನು ಕುರಿತು ಬೇವರ್ಸಿ ನನ್ನ ಮಗನೆ ಎಂದು ಬೈದಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ಸಾಕ್ಷಿಯು ಒಪ್ಪದಿದ್ದ ಕಾರಣ ಸದರಿ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

ನಾನು ಮತ್ತು ಆರೋಪಿತರು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಹಾಗಾಗಿ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು ಇಲ್ಲ.**

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಬಾಗೇಪಲ್ಲಿ .